# <u>ಮಲಗಿ ಎದ್ದನು ರಂಗ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 32
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 445
3. **Note:** The lyrics given without highlights are as per Ref. 2. The wordings given in green highlights are as per Ref. 1.
4. **Note:** Singer has followed lyrics as in Ref. 2.

ರಾಗ: ಸೌರಾಷ್ಟ್ರ                ತಾಳ: ಆದಿ

ಮಲಗಿ ಎದ್ದನು ಕಾಣೆ ಮಕ್ಕಳ ಮಾಣಿಕ ರಂಗ, ಎದ್ದ ಕಾಣೆ ಅಮ್ಮ
ಛಲಹೋರಿ ಅಳುತಾನೆ ಮೊಲೆ ಕೊಡೆ ರಂಗಗೆ, ಎದ್ದ ಕಾಣೆ || ಪ ||

ಧರೆಯೊಳು ತಮನ ಮರ್ದಿಸಲೆಂದು ಮತ್ಸ್ಯನಾ, ಗೆದ್ದ ಕಾಣೆ
ಭರದಿ ಮಂದರ ಪೊತ್ತು ಇಳೆಯೊಳು ಕೂರ್ಮನಾ, ಗೆದ್ದ ಕಾಣೆ
ಧರೆಯ ಕದ್ದಸುರನ್ನ ಕೊಲಲೆಂದು ವರಹನಾ, ಗೆದ್ದ ಕಾಣೆ
ತರಳ ಕರೆಯೆ ಕಂಭದಿಂದ ನರಸಿಂಹನಾ, ಗೆದ್ದ ಕಾಣೆ || 1 ||

ಚಿಕ್ಕ ವೇಷದಲಿ ದಾನವ ಬೇಡಿ ವಾಮನಾ, ಗೆದ್ದ ಕಾಣೆ
ಉಕ್ಕಿನ ಕೊಡಲಿಯ ಪಿಡಿದು ಪರಶುರಾಮ, ಎದ್ದ ಕಾಣೆ
ರಕ್ಕಸ ರಾವಣನ ಕೊಲಲೆಂದು ಶ್ರೀ ರಾಮ, ಎದ್ದ ಕಾಣೆ
ಸೊಕ್ಕಿದ ಕಂಸನ್ನ ವಧೆ ಮಾಡೆ ಶ್ರೀ ಕೃಷ್ಣ, ಎದ್ದ ಕಾಣೆ || 2 ||

ಪುರದ ಸತಿಯರ ವ್ರತವನಳಿದ ಬುದ್ದನೆದ್ದ ಕಾಣೆ
ಹರುಷದಿ ತುರಗವನೇರಿದ ಕಲ್ಕ್ಯ ತಾನೆದ್ದ ಕಾಣೆ
ಶರಣಾಗತರನ್ನು ಪಾಲಿಪ ಶ್ರೀಹರಿಯೆದ್ದ ಕಾಣೆ ನಮ್ಮ
ವರದ ಪುರಂದರ ವಿಠಲ ಕೋಟಿಸೂರ್ಯನೆದ್ದ ಕಾಣೆ || 3 ||

**Note:** Below mentioned lyrics, given in green highlights, are as per Ref. 1 cited

above.

ರಾಗ: ಮೋಹನ                    ತಾಳ: ಅಟ

ಮಲಗಿ ಎದ್ದನು ರಂಗ, ಮಕ್ಕಳ ಮಾಣಿಕ ಕೃಷ್ಣ
ಛಲ ಹಿಡಿದನು ನೋಡೆ ಮೊಲೆಕೊಡೆ ಕೃಷ್ಣಗೆ     || ಪ ||

ಜಲದೊಳು ತಮನ ಮರ್ದಿಸಿ ಅಂದು ಮತ್ಸ್ಯನಾಗಿ
ಬಲುಗಿರಿಯ ನೆಗಹಿ ಮರೆಮಾಡಿ ಕೂರ್ಮನಾಗಿ
ನೆಲನ ಒಯ್ದವನ ಕೊಲುವೆನೆಂದು ವರಹನಾಗಿ
ಬಲು ಭಕ್ತಿಗಾಗಿ ಕಂಬದಿ ನಾರಸಿಂಹನಾಗಿ     || 1 ||

ಚಿಕ್ಕ ರೂಪದಿಂದ ಬಲಿಯ ದಾನವ ಬೇಡಿ
ಉಕ್ಕಿನ ಕೊಡಲಿಯ ಪಿಡಿದ ಪರಶುರಾಮ
ಮಿಕ್ಕಿದ ತಲೆಯ ಚೆಂಡಾಡಿದ ಶ್ರೀರಾಮ
ಸೊಕ್ಕಿದ ಕಂಸನ ಕೊಲುವೆನೆಂದ ಕೃಷ್ಣ     || 2 ||

ಬಲು ಪತಿವ್ರತೆಯರ ವ್ರತವನಳಿದ ಬುದ್ಧ
ಕಲಿಯಾಗಿ ಖಡಗುವ ಪಿಡಿದು ಕುದುರೆ ಏರಿ
ಒಲಿದು ಭಕ್ತರನೆಲ್ಲ ಸಲಹುವೆನೆಂತೆಂದು
ಚೆಲುವ ಪುರಂದರ ವಿಠಲ ತೊಟ್ಟಿಲೊಳು     || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನು ನಿದ್ರೆಯಿಂದ ಎದ್ದುದನ್ನುದಶಾವತಾರದ ವರ್ಣನೆಯೊಂದಿಗೆ ದಾಸರು ಈ ಹಾಡಿನಲ್ಲಿ ವರ್ಣಿಸಿದ್ದಾರೆ.

**ಛಲ** = ಹಠ

**ತಮ : -** ವೇದವನ್ನು ಕದ್ದು ಸಮುದ್ರದಲ್ಲಿ ಮುಳುಗಿದ ಒಬ್ಬ ದೈತ್ಯ.  ಇವನಿಗೆ ಸೋಮಕ, ಶಂಕಾಸುರ ಎಂಬ ಹೆಸರುಗಳಿವೆ.  ಶ್ರೀ ಹರಿ ಮತ್ಸ್ಯಾವತಾರ ತಾಳಿ ಇವನನ್ನು ಕೊಂದು ವೇದಗಳನ್ನು ಉದ್ಧರಿಸಿದನು.

**ಬಲು** = ದೊಡ್ಡದಾದ

**ನೆಲನ ಒಯ್ದವ** = ಹಿರಣ್ಯಾಕ್ಷ

**ಚಿಕ್ಕ ರೂಪ** = ವಾಮನ

**ಮಿಕ್ಕಿದ** = ಸೊಕ್ಕಿ ಗೆದ್ದವ

**Classification:** Keerthane
**Ankita:** purandara vittala
**Location:** NA
**Category:** Dashavatara, Krishna Leele
**Sub-Category:** ranga, makkalu, Krishna, dashavatara, niru, vrata, kudure,
**Pravachana:** NA
**Explanation:** NA